# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

"ಗ್ರಾಮೀಣಾಭಿವೃದ್ಧಿ ಭವನ", 4 & 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560 009

ಸಂ:ಕೆಆರ್‌ಐಡಿಎಲ್/ಆಡಳಿತ/371-ಜೆ/2014-15 ದಿನಾಂಕ 17-03-2015

## ಸು ತ್ತೋ ಲೆ

**ವಿಷಯ:** ಕೆಆರ್‌ಐಡಿಎಲ್ ಸಂಸ್ಥೆಯಲ್ಲಿ ಹೈದ್ರಾಬಾದ್-ಕರ್ನಾಟಕದ ಸ್ಥಳೀಯ ವೃಂದಗಳಿಗೆ ಹುದ್ದೆಗಳನ್ನು ಕಾಯ್ದಿರಿಸುವ ಬಗ್ಗೆ ಸರ್ಕಾರದ ತಿದ್ದುಪಡಿ ಆದೇಶವನ್ನು ಪ್ರಚುರಪಡಿಸುವ ಕುರಿತು.

**ಉಲ್ಲೇಖ:** ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಅಧಿಸೂಚನೆ 2013 ದಿನಾಂಕ:06.11.2013.

2) ಸರ್ಕಾರದ ಅಧಿಸೂಚನೆ ಸಂ.ಗ್ರಾಅಪ/59/ಇತರೆ/2013 ದಿನಾಂಕ:17.02.2014

3) ಕೆಆರ್‌ಐಡಿಎಲ್ ಆದೇಶ ಸಂ:ಕೆಆರ್‌ಐಡಿಎಲ್/ಆಡಳಿತ/ಸಿಆರ್-2/2013-14 ದಿನಾಂಕ:07.11.2014.

4) ಸರ್ಕಾರದ ತಿದ್ದುಪಡಿ ಸಂ:ಗ್ರಾಅಪ/221/ಸ್ವೀಮರ/2014 ದಿನಾಂಕ 16-03-2015

# # # #

ಹೈದ್ರಾಬಾದ್-ಕರ್ನಾಟಕದ ಸ್ಥಳೀಯ ವೃಂದಗಳಿಗೆ 371 ಜೆ ಅಡಿಯಲ್ಲಿ ಹುದ್ದೆಗಳನ್ನು ಕಾಯ್ದಿರಿಸುವ ಕುರಿತು ಕರ್ನಾಟಕ ಸರ್ಕಾರವು ದಿನಾಂಕ 06.11.2013 ರಂದು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಅಧಿಸೂಚನೆ 2013ನ್ನು ಹೊರಡಿಸಿರುತ್ತದೆ. ಆ ಪ್ರಕಾರ ಕೆಆರ್‌ಐಡಿಎಲ್ ಸಂಸ್ಥೆಯಲ್ಲಿಯೂ ಕೂಡ 371 ಜೆ ಅಡಿಯಲ್ಲಿ ಹುದ್ದೆಗಳನ್ನು ಕಾಯ್ದಿರಿಸಲು ಕರ್ನಾಟಕ ಸರ್ಕಾರವು ಉಲ್ಲೇಖ -2 ಪ್ರಕಾರ ದಿನಾಂಕ 17-02-2014 ರಂದು ಅಧಿಸೂಚನೆಯನ್ನು ಪ್ರಚುರಪಡಿಸಿರುತ್ತದೆ. ಸದರಿ ಅಧಿಸೂಚನೆಯು ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಿದ ಕಾರಣ, ಆ ಪ್ರದೇಶಕ್ಕೆ ಸಂಬಂಧಿಸಿದ ಸಿಬ್ಬಂದಿಗಳು ಮಂಜೂರಾದ ಹುದ್ದೆಗಳಿಗೆ ಅನುಗುಣವಾಗಿ ಮೀಸಲಾತಿಯನ್ನು ಕಲ್ಪಿಸಬೇಕೆಂದು ಸರ್ಕಾರಕ್ಕೆ ಸಲ್ಲಿಸಿದ ಮನವಿಯನ್ನು ಪರಿಗಣಿಸಿ ಮಂಜೂರಾದ ಹುದ್ದೆಗಳಿಗೆ ಅನುಗುಣವಾಗಿ ಮೀಸಲಾತಿಯನ್ನು ಕಲ್ಪಿಸಿ, ಉಲ್ಲೇಖ (3) ರಲ್ಲಿ ಕೆಆರ್‌ಐಡಿಎಲ್ ಸಂಸ್ಥೆಯು ಆದೇಶ ಹೊರಡಿಸಿರುತ್ತದೆ ಹಾಗೂ ಉಲ್ಲೇಖ 2 ರ ಅಧಿಸೂಚನೆಯ ತಿದ್ದುಪಡಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಕೆಆರ್‌ಐಡಿಎಲ್ ಸಂಸ್ಥೆಯು ಸಲ್ಲಿಸಿದ ಪ್ರಸ್ತಾವನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಹೈದರಾಬಾದ್-ಕರ್ನಾಟಕ ವಿಶೇಷ ಕೋಶ) ಇಲಾಖೆಯ ಪರಿಶೀಲನೆಯ ನಂತರ ಸರ್ಕಾರವು ದಿನಾಂಕ 17-02-2014ರ ಅಧಿಸೂಚನೆಗೆ ತಿದ್ದುಪಡಿ ಆದೇಶವನ್ನು ಉಲ್ಲೇಖ (4) ಪ್ರಕಾರ ಹೊರಡಿಸಿರುತ್ತದೆ. ಅದರಂತೆ ಅನುಬಂಧ 31 ರಿಂದ 49 ರವರೆಗೆ ವಿವಿಧ ವೃಂದಗಳಿಗೆ ಕಲ್ಪಿಸಿರುವ ಮೀಸಲಾತಿಯ ಬಗ್ಗೆ ತಿಳಿಯಪಡಿಸಲಾಗಿದ್ದು, ಸದರಿ ತಿದ್ದುಪಡಿ ಆದೇಶವನ್ನು ಕೆಆರ್‌ಐಡಿಎಲ್ ಸಂಸ್ಥೆಯ ಸಿಬ್ಬಂದಿಗಳ ಮಾಹಿತಿಗಾಗಿ ಈ ಮೂಲಕ ಪ್ರಚುರ ಪಡಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು,
ಕೆಆರ್‌ಐಡಿಎಲ್, ಬೆಂಗಳೂರು

**ಲಗತ್ತು: ಅನುಬಂಧ 31 ರಿಂದ 49.**

ಗೆ,

ಕೆಆರ್‌ಐಡಿಎಲ್ ಸಂಸ್ಥೆಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ.

**ಪ್ರತಿಯನ್ನು:**

ಎಲ್ಲಾ ಮುಖ್ಯ ಅಭಿಯಂತರರುಗಳು, ಕೆಆರ್‌ಐಡಿಎಲ್, ಕೇಂದ್ರ ಕಛೇರಿ.

ಮುಖ್ಯ ಹಣಕಾಸು ಅಧೀಕಾರಿಗಳು, ಕೆಆರ್‌ಐಡಿಎಲ್, ಕೇಂದ್ರ ಕಛೇರಿ.

ಎಲ್ಲಾ ಅಧೀಕ್ಷಕ ಅಭಿಯಂತರರು/ಕಾರ್ಯಪಾಲಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಆರ್‌ಐಡಿಎಲ್ – ಇವರುಗಳ ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಲ್ಲಿ ಗಮನಕ್ಕೆ ತರಲು ಸೂಚಿಲಾಗಿದೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 221 ಸ್ವೀಮರ 2014

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 16.03.2015

**ತಿದ್ದುಪಡಿ**

ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 59 ಇತರೆ 2013, ದಿನಾಂಕ: 17.02.2014 ರಲ್ಲಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ರ ಕಂಡಿಕೆ 3 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಡಿ ಬರುವ ಇಲಾಖೆ / ಸ್ಥಳೀಯ ಸಂಸ್ಥೆ /ನಿಗಮಗಳಲ್ಲಿ ಸ್ಥಳೀಯ ವೃಂದಗಳನ್ನು ರಚಿಸಿ ಸದರಿ ವೃಂದದ ಹುದ್ದೆಗಳ ಸಂಖ್ಯೆಯನ್ನು ಸಹ ಗುರುತಿಸಿ ಆದೇಶಿಸಲಾಗಿದೆ.

ಸದರಿ ಅಧಿಸೂಚನೆಯಲ್ಲಿ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ಸಂಸ್ಥೆ (ಕೆ.ಆರ್.ಐ.ಡಿ.ಎಲ್.ಸಂಸ್ಥೆ) ಗೆ ಸಂಬಂಧಿಸಿದಂತೆ ಗ್ರೂಪ್ ಎ, ಬಿ, ಸಿ ಮತ್ತು ಡಿ ವೃಂದಗಳಿಗೆ ಸ್ಥಳೀಯ ವೃಂದಗಳನ್ನು ರಚಿಸಿ ಸದರಿ ವೃಂದಗಳಲ್ಲಿ ಹುದ್ದೆಗಳ ಸಂಖ್ಯೆಯನ್ನು ಗುರುತಿಸಿ ಆದೇಶಿಸಲಾಗಿದೆ. ಈ ರೀತಿ ಗುರುತಿಸಿ ಅಧಿಸೂಚಿಸಿದ ನಂತರ, ಕೆ.ಆರ್.ಐ.ಡಿ.ಎಲ್.ಸಂಸ್ಥೆಯಲ್ಲಿ ಸೃಜನೆಯಾಗಿರುವ ವಿವಿಧ ವೃಂದಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಹಾಗೂ ಹೈದರಾಬಾದ್–ಕರ್ನಾಟಕ ಪ್ರದೇಶದ ವ್ಯಾಪ್ತಿಯಡಿ ಬರುವ ಆರು ಜಿಲ್ಲೆಗಳು ಮತ್ತು ಕೇಂದ್ರ ಕಛೇರಿಯಲ್ಲಿನ ಹುದ್ದೆಗಳ ಸಂಖ್ಯೆಯಲ್ಲಿ ವ್ಯತ್ಯಯ ಕಂಡುಬಂದಿದ್ದು, ಸದರಿ ಸಂಸ್ಥೆಯು ಈ ಬಗ್ಗೆ ಪರಿಷ್ಕೃತ ಮಾಹಿತಿಯನ್ನು ದಿನಾಂಕ: 21.11.2014 ಮತ್ತು ದಿನಾಂಕ: 03.01.2015 ಗಳಂದು ಒದಗಿಸಿದೆ. ಅದನ್ನು ಪರಿಶೀಲಿಸಿ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ಸಂಬಂಧಿಸಿದಂತೆ ಮಾತ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 59 ಇತರೆ 2013 ದಿನಾಂಕ: 17.02.2014ರಲ್ಲಿ ಅಧಿಸೂಚಿಸಿರುವುದಕ್ಕೆ ಬದಲಾಗಿ ಈ ಕೆಳಗೆ ನಮೂದಿಸಿರುವಂತೆ ಸ್ಥಳೀಯ ವೃಂದಗಳನ್ನು ಸೇರ್ಪಡೆ ಮಾಡಿಕೊಂಡು ಓದಿಕೊಳ್ಳತಕ್ಕದ್ದು:–

**"ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ (KRIDL):**

ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ದಿ ನಿಯಮಿತ ಈ ಸಂಸ್ಥೆಯಲ್ಲಿ ಮಂಜೂರಾಗಿರುವ ಎಲ್ಲಾ ಗ್ರೂಪ್–ಎ, ಬಿ, ಸಿ ಮತ್ತು ಡಿ ವೃಂದಗಳು ರಾಜ್ಯ ವ್ಯಾಪಿ ವೃಂದಗಳಾಗಿದ್ದು, ಸದರಿ ಸಂಸ್ಥೆಯ ಕೇಂದ್ರ ಕಛೇರಿಯ ನಿಯಂತ್ರಣಕ್ಕೊಳಪಟ್ಟಿವೆ.

**ರಾಜ್ಯ ವ್ಯಾಪಿ ಸ್ಥಳೀಯ ವೃಂದಗಳು:–**

**ಗುಂಪು–ಎ (ಕಿರಿಯ ಶ್ರೇಣಿ) ವೃಂದ:**

1) **ಸಹಾಯಕ ಕಾರ್ಯಪಾಲಕ ಅಭಿಯಂತರರು (ಗ್ರೇಡ್–1)** : ಈ ವೃಂದದಲ್ಲಿ 15 ಹುದ್ದೆಗಳು ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಒಟ್ಟು 15 ಹುದ್ದೆಗಳಿಗೆ ಶೇ.75ರ ಮೀಸಲಾತಿಯಂತೆ ಈ ವೃಂದದಲ್ಲಿ 12 ಹುದ್ದೆಗಳು ಸ್ಥಳೀಯರಿಗೆ ಹಾಗೂ 03 ಹುದ್ದೆಗಳು ಸ್ಥಳೀಯೇತರರಿಗೆ ಲಭ್ಯವಾಗುತ್ತವೆ. ಮುಂದುವರೆದು, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಈ ಹುದ್ದೆಗಳನ್ನು ಶೇ.90ರಷ್ಟು ಮುಂಬಡ್ತಿಯಿಂದ ಹಾಗೂ ಶೇ.10ರಷ್ಟು ನೇರ ನೇಮಕಾತಿಯಿಂದ ತುಂಬಬೇಕಾಗಿದ್ದು, ಅದರಂತೆ, ಸ್ಥಳೀಯರಿಗೆ ನೇರ ನೇಮಕಾತಿಯಡಿಯಲ್ಲಿ 01 ಹುದ್ದೆ ಮತ್ತು ಮುಂಬಡ್ತಿಯಡಿ 11 ಹುದ್ದೆಗಳು ಲಭ್ಯವಾಗುತ್ತವೆ. ಈ ವೃಂದದಲ್ಲಿ ಮೂವರು ಸ್ಥಳೀಯರು ಹಾಗೂ ಮೂವರು ಸ್ಥಳೀಯೇತರರು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ.

..2..

ಆದುದರಿಂದ ಈ ವೃಂದದಲ್ಲಿ ನೇರ ನೇಮಕಾತಿಯಡಿ ಒಂದು ಹಾಗೂ ಮುಂಬಡ್ತಿಯಡಿ 8 ಹುದ್ದೆಗಳು ಸ್ಥಳೀಯರಿಗೆ ಕೊರತೆ ಇದೆ. ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ-31** ರಲ್ಲಿ ನೀಡಲಾಗಿದೆ.

2) **ಸಹಾಯಕ ಕಾರ್ಯಪಾಲಕ ಅಭಿಯಂತರರು (ಗ್ರೇಡ್-2) :** ಈ ವೃಂದದಲ್ಲಿ ಬಳ್ಳಾರಿ ಜಿಲ್ಲೆಗೆ ಒಂದು, ಕಲಬುರಗಿ ಜಿಲ್ಲೆಗೆ 2 ಮತ್ತು ರಾಯಚೂರು ಜಿಲ್ಲೆಗೆ ಒಂದು ಹುದ್ದೆಯಂತೆ ಅಂದರೆ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಒಟ್ಟು 04 ಹುದ್ದೆಗಳು ಮಂಜೂರಾಗಿವೆ. ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಈ ಹುದ್ದೆಗಳನ್ನು ಶೇ.100ರಷ್ಟು ಮುಂಬಡ್ತಿಯಿಂದ ತುಂಬಬೇಕಿದೆ. ಶೇ.75ರ ಮೀಸಲಾತಿಯಂತೆ ಹೈದರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯರಿಗೆ 03 ಹುದ್ದೆಗಳು ಮತ್ತು ಸ್ಥಳಿಯೇತರರಿಗೆ 01 ಹುದ್ದೆ ಲಭ್ಯವಾಗುತ್ತಿದ್ದು, 03 ಹುದ್ದೆಗಳನ್ನು ಮುಂಬಡ್ತಿಯಿಂದ ತುಂಬಲು ಸ್ಥಳೀಯರಿಗೆ ಮೀಸಲಿರಿಸಲಾಗಿದೆ. ಈ ವೃಂದದಲ್ಲಿ ಒಬ್ಬರು ಸ್ಥಳೀಯರು ಹಾಗೂ ಇಬ್ಬರು ಸ್ಥಳೀಯೇತರರು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ. ಆದುದರಿಂದ ಈ ವೃಂದದಲ್ಲಿ ಸ್ಥಳೀಯರಿಗೆ 2 ಹುದ್ದೆಗಳ ಕೊರತೆ ಇದೆ ಹಾಗೂ ಒಬ್ಬರು ಸ್ಥಳೀಯೇತರರು ಹೆಚ್ಚುವರಿಯಾಗಿದ್ದಾರೆ. ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ-32**ರಲ್ಲಿ ನೀಡಲಾಗಿದೆ.

**<u>ಗ್ರೂಪ್-ಬಿ ವೃಂದ :</u>**

1) **ಸಹಾಯಕ ಅಭಿಯಂತರರು (ಗ್ರೇಡ್-1):** ಈ ವೃಂದದಲ್ಲಿ ಒಟ್ಟು 34 ಹುದ್ದೆಗಳು ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಒಟ್ಟು 34 ಹುದ್ದೆಗಳಿಗೆ ಶೇ.75ರ ಮೀಸಲಾತಿಯಂತೆ 26 ಹುದ್ದೆಗಳು ಸ್ಥಳೀಯರಿಗೆ ಹಾಗೂ 08 ಹುದ್ದೆಗಳು ಸ್ಥಳಿಯೇತರಿಗೆ ಲಭ್ಯವಾಗುತ್ತವೆ. ಮುಂದುವರೆದು, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಈ ಹುದ್ದೆಗಳನ್ನು **ಶೇ.90ರಷ್ಟು** ನೇರ ನೇಮಕಾತಿಯಿಂದ ಹಾಗೂ **ಶೇ.10ರಷ್ಟು** ಮುಂಬಡ್ತಿಯಿಂದ ತುಂಬಬೇಕಾಗಿದ್ದು, ಅದರಂತೆ ಸ್ಥಳೀಯರಿಗೆ ನೇರ ನೇಮಕಾತಿಯಡಿಯಲ್ಲಿ 23 ಹುದ್ದೆ ಮತ್ತು ಮುಂಬಡ್ತಿಯಡಿ 03 ಹುದ್ದೆಗಳು ಲಭ್ಯವಾಗುತ್ತವೆ. ಈ ವೃಂದದಲ್ಲಿ ಸ್ಥಳೀಯರಿಗೆ ಒಟ್ಟು 14 ಹುದ್ದೆಗಳು ನೇರ ನೇಮಕಾತಿಯಡಿ ಹಾಗೂ ಒಂದು ಹುದ್ದೆ ಮುಂಬಡ್ತಿಯಡಿ ಕೊರತೆ ಇದೆ. ಅಲ್ಲದೆ ಈ ವೃಂದದಲ್ಲಿ ಕಾರ್ಯನಿರತ 19 ಅಧಿಕಾರಿಗಳ ಪೈಕಿ ಸ್ಥಳೀಯರು 11 ಹಾಗೂ ಸ್ಥಳಿಯೇತರರು 8 ಅಧಿಕಾರಿಗಳು ಇರುವರು. ಇವರಲ್ಲಿ 9 ಅಧಿಕಾರಿಗಳು ನೇರ ನೇಮಕಾತಿ ಮೂಲಕ ಹಾಗೂ ಇಬ್ಬರು ಮುಂಬಡ್ತಿ ಮೂಲಕ ನೇಮಕಗೊಂಡವರಾಗಿದ್ದಾರೆ. ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ-33**ರಲ್ಲಿ ನೀಡಲಾಗಿದೆ.

2) **ಸಹಾಯಕ ಅಭಿಯಂತರರು (ಗ್ರೇಡ್-2):** ಈ ವೃಂದದಲ್ಲಿ 11 ಹುದ್ದೆಗಳು ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಮಂಜೂರಾಗಿವೆ. ಸದರಿ ಒಟ್ಟು 11 ಹುದ್ದೆಗಳಿಗೆ ಶೇ.75ರ ಮೀಸಲಾತಿಯಂತೆ 09 ಹುದ್ದೆಗಳು ಸ್ಥಳೀಯರಿಗೆ ಹಾಗೂ 02 ಹುದ್ದೆಗಳು ಸ್ಥಳಿಯೇತರಿಗೆ ಲಭ್ಯವಾಗುತ್ತವೆ. ಮುಂದುವರೆದು, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಈ ಹುದ್ದೆಗಳನ್ನು ಶೇ.100ರಷ್ಟು ಮುಂಬಡ್ತಿಯಿಂದ ತುಂಬಬೇಕಾಗಿದ್ದು, ಅದರಂತೆ ಮುಂಬಡ್ತಿಯಿಂದ ಭರ್ತಿ ಮಾಡಲು ಸ್ಥಳೀಯರಿಗೆ 09 ಹುದ್ದೆಗಳನ್ನು ಮೀಸಲಿರಿಸಿದೆ. ಈ ವೃಂದದಲ್ಲಿ ಒಟ್ಟು 11 ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಆ ಪೈಕಿ ನಾಲ್ವರು ಸ್ಥಳೀಯರು ಹಾಗೂ ಏಳು ಸ್ಥಳಿಯೇತರರು ಒಳಗೊಂಡಿದ್ದಾರೆ. ಆದ್ದರಿಂದ ಸ್ಥಳೀಯರಿಗೆ 5 ಹುದ್ದೆಗಳ ಕೊರತೆ ಇದೆ. ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ-34**ರಲ್ಲಿ ನೀಡಲಾಗಿದೆ.



(ಸಿದ್ದೇಶ್ ಹೊನ್ನಳ್ಳಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-೨),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಗ್ರೂಪ್-ಸಿ ವೃಂದ:**

1) **ಕಿರಿಯ ಅಭಿಯಂತರರು** : ಈ ವೃಂದದಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಾದ (1) ಬಳ್ಳಾರಿ ಜಿಲ್ಲೆಗೆ 03, (2) ರಾಯಚೂರು ಜಿಲ್ಲೆಗೆ 02, (3) ಕಲಬುರಗಿ ಜಿಲ್ಲೆಗೆ 02 (4) ಕೊಪ್ಪಳ ಜಿಲ್ಲೆಗೆ 01 (5) ಬೀದರ್ ಜಿಲ್ಲೆಗೆ 01 ಮತ್ತು (6) ಯಾದಗಿರಿ ಜಿಲ್ಲೆಗೆ 00 ಹೀಗೆ ಒಟ್ಟು 9 ಹುದ್ದೆಗಳು ಮಂಜೂರಾಗಿರುತ್ತವೆ. ಈ ವೃಂದದಲ್ಲಿ ಶೇ.80ರ ಮೀಸಲಾತಿಯಂತೆ ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯರಿಗೆ 08 ಹುದ್ದೆಗಳನ್ನು ಮೀಸಲಿರಿಸಿದೆ ಮತ್ತು ಸ್ಥಳಿಯೇತರರಿಗೆ 01 ಹುದ್ದೆ ಲಭ್ಯವಾಗುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ಹುದ್ದೆಗಳನ್ನು ಶೇ.100ರಷ್ಟು ನೇರ ನೇಮಕಾತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ.

ಈ ವೃಂದದಲ್ಲಿ 8 ಸ್ಥಳೀಯರು ಹಾಗೂ ಒಬ್ಬರು ಸ್ಥಳಿಯೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಒಟ್ಟಾರೆ ಸ್ಥಳೀಯರಿಗೆ ಈ ವೃಂದದ ಮೀಸಲಾತಿಯಲ್ಲಿ ಕೊರತೆ ಇರುವುದಿಲ್ಲ. ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ-35**ರಲ್ಲಿ ನೀಡಲಾಗಿದೆ.

2) **ಅಧೀಕ್ಷಕರು:** ಈ ವೃಂದದಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬಳ್ಳಾರಿ ಜಿಲ್ಲೆಗೆ 02 ಹುದ್ದೆಗಳು ಹಾಗೂ ಉಳಿದ ಐದು ಜಿಲ್ಲೆಗಳಿಗೆ ತಲಾ ಒಂದರಂತೆ 5, ಹೀಗೆ ಒಟ್ಟಾರೆ 07 ಹುದ್ದೆಗಳು ಮಂಜೂರಾಗಿರುತ್ತವೆ. ಶೇ.80ರ ಮೀಸಲಾತಿಯಂತೆ ಸ್ಥಳೀಯರಿಗೆ 06 ಹುದ್ದೆಗಳು ಹಾಗೂ ಸ್ಥಳೀಯೇತರರಿಗೆ 01 ಹುದ್ದೆ ಲಭ್ಯವಾಗುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ, ಈ ಹುದ್ದೆಗಳನ್ನು ಶೇ.100ರಷ್ಟು ಮುಂಬಡ್ತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ. ಅದರನ್ವಯ 06 ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಸ್ಥಳೀಯರಿಗೆ ಮೀಸಲಿರಿಸಿದೆ. ಮುಂದುವರೆದು, ಈ ವೃಂದದಲ್ಲಿ ಒಟ್ಟು ಮೂರು ಸ್ಥಳೀಯ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಸ್ಥಳೀಯರಿಗೆ 3 ಹುದ್ದೆಗಳ ಕೊರತೆ ಇದೆ. ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ-36**ರಲ್ಲಿ ನೀಡಲಾಗಿದೆ.

3) **ಪ್ರಥಮ ದರ್ಜೆ ಸಹಾಯಕರು:** ಈ ವೃಂದದಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಾದ (1) ಬಳ್ಳಾರಿ ಜಿಲ್ಲೆಗೆ 04 (2) ರಾಯಚೂರು ಜಿಲ್ಲೆಗೆ 3 (3) ಯಾದಗಿರಿ ಜಿಲ್ಲೆಗೆ 02 (4) ಕಲಬುರಗಿ ಜಿಲ್ಲೆಗೆ 03, (5) ಕೊಪ್ಪಳ ಜಿಲ್ಲೆಗೆ 01 ಮತ್ತು (6) ಬೀದರ್ ಜಿಲ್ಲೆಗೆ 01 ಹೀಗೆ ಒಟ್ಟು 14 ಹುದ್ದೆಗಳು ಮಂಜೂರಾಗಿರುತ್ತವೆ. ಈ ವೃಂದದಲ್ಲಿ ಶೇ.80ರ ಮೀಸಲಾತಿಯಂತೆ ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯರಿಗೆ 12 ಹುದ್ದೆಗಳನ್ನು ಮೀಸಲಿರಿಸಿದೆ ಮತ್ತು ಸ್ಥಳಿಯೇತರರಿಗೆ 2 ಹುದ್ದೆಗಳು ಲಭ್ಯವಾಗುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ, ಈ ಹುದ್ದೆಗಳನ್ನು ಶೇ.50ರಷ್ಟು ನೇರ ನೇಮಕಾತಿಯಿಂದ ಹಾಗೂ ಶೇ.50ರಷ್ಟು ಮುಂಬಡ್ತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ.

ಈ ವೃಂದದಲ್ಲಿ ಒಟ್ಟಾರೆ 5 ಹುದ್ದೆಗಳು ಸ್ಥಳೀಯರಿಗೆ ಕೊರತೆ ಇದೆ. ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ-37**ರಲ್ಲಿ ನೀಡಲಾಗಿದೆ.

4) **ದ್ವಿತೀಯ ದರ್ಜೆ ಸಹಾಯಕ:** ಈ ವೃಂದದಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಾದ (1) ಬಳ್ಳಾರಿ ಜಿಲ್ಲೆಗೆ 03 (2) ರಾಯಚೂರು ಜಿಲ್ಲೆಗೆ 02, (3) ಯಾದಗಿರಿ ಜಿಲ್ಲೆಗೆ 01, (4) ಕಲಬುರಗಿ ಜಿಲ್ಲೆಗೆ 02, (5) ಕೊಪ್ಪಳ ಜಿಲ್ಲೆಗೆ 02 ಮತ್ತು (6) ಬೀದರ್ ಜಿಲ್ಲೆಗೆ 02 ಹೀಗೆ ಒಟ್ಟು 12 ಹುದ್ದೆಗಳು ಮಂಜೂರಾಗಿರುತ್ತವೆ. ಈ ವೃಂದದಲ್ಲಿ ಶೇ.80ರ ಮೀಸಲಾತಿಯಂತೆ ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯರಿಗೆ 10 ಹುದ್ದೆಗಳನ್ನು ಮೀಸಲಿರಿಸಿದೆ ಮತ್ತು ಸ್ಥಳಿಯೇತರರಿಗೆ 02 ಹುದ್ದೆಗಳು ಲಭ್ಯವಾಗುತ್ತವೆ. ವೃಂದ ಮತ್ತು ನೇಮಕಾತಿ ನಿಯಮಗಳ

..4..

([illegible])
ಸರ್ಕಾರದ ಅಧೀನ ಕಾರ್ಯದರ್ಶಿ (ನೇಮಕಾತಿ-2)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರಕಾರ ಈ ಹುದ್ದೆಗಳನ್ನು ಶೇ.90ರಷ್ಟು ನೇರ ನೇಮಕಾತಿಯಿಂದ ಹಾಗೂ ಶೇ.10ರಷ್ಟು ಮುಂಬಡ್ತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ. ಈ ವೃಂದದಲ್ಲಿ ಹತ್ತು ಮಂದಿ ಸ್ಥಳೀಯರು ಕಾರ್ಯನಿರ್ವಹಿಸುತ್ತಿದ್ದು, ಆ ಪೈಕಿ ನೇರ ನೇಮಕಾತಿಯಡಿ 09 ಹಾಗೂ ಮುಂಬಡ್ತಿಯಡಿ ಒಬ್ಬರು ಸೇರಿದವರಾಗಿದ್ದಾರೆ. ಯಾವುದೇ ಕೊರತೆ ಸ್ಥಳೀಯರಿಗೆ ಈ ವೃಂದದಲ್ಲಿ ಇರುವುದಿಲ್ಲ. ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ–38** ರಲ್ಲಿ ನೀಡಲಾಗಿದೆ.

5) **ಉಗ್ರಾಣ ಪಾಲಕ ಗ್ರೇಡ್–2**: ಈ ವೃಂದದಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬಳ್ಳಾರಿ – 2, ಕಲಬುರಗಿ –1, ಬೀದರ್ –1, ರಾಯಚೂರು – 1, ಕೊಪ್ಪಳ – 1 ಮತ್ತು ಯಾದಗಿರಿ – 01 ಒಟ್ಟು 07 ಹುದ್ದೆಗಳು ಮಂಜೂರಾಗಿವೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ವೃಂದದಲ್ಲಿ ಶೇ.100ರಷ್ಟನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ವೃಂದದಲ್ಲಿ ಶೇ.80ರ ಮೀಸಲಾತಿಯಂತೆ ಸ್ಥಳೀಯರಿಗೆ ನೇರ ನೇಮಕಾತಿಯಡಿ ಭರ್ತಿ ಮಾಡಲು ಸದರಿ 06 ಹುದ್ದೆಗಳನ್ನು ಹಾಗೂ ಸ್ಥಳೀಯೇತರರಿಗೆ 01 ಹುದ್ದೆಯನ್ನು ಮೀಸಲಿರಿಸಲಾಗಿದೆ.

ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ–39**ರಲ್ಲಿ ನೀಡಲಾಗಿದೆ.

6) **ಕಂಪ್ಯೂಟರ್ ಆಪರೇಟರ್ (ಗ್ರೇಡ್ –2)** : ಈ ವೃಂದದಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ 6 ಜಿಲ್ಲೆಗಳ ಪೈಕಿ ಕೊಪ್ಪಳ ಜಿಲ್ಲೆಯನ್ನು ಹೊರತುಪಡಿಸಿ, ಉಳಿದ ಎಲ್ಲಾ ಜಿಲ್ಲೆಗಳಿಗೆ ತಲಾ ಒಂದರಂತೆ ಒಟ್ಟು 05 ಹುದ್ದೆಗಳು ಮಂಜೂರಾಗಿವೆ. ಈ ವೃಂದದಲ್ಲಿ ಶೇ.80ರ ಮೀಸಲಾತಿಯಂತೆ ಹೈದರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯರಿಗೆ 04 ಹುದ್ದೆಗಳನ್ನು ಹಾಗೂ ಸ್ಥಳೀಯೇತರರಿಗೆ 01 ಹುದ್ದೆಯನ್ನು ಮೀಸಲಿರಿಸಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ಹುದ್ದೆಗಳನ್ನು ಶೇ.90ರಷ್ಟು ನೇರ ನೇಮಕಾತಿಯಿಂದ ಮತ್ತು ಶೇ.10ರಷ್ಟನ್ನು ಮುಂಬಡ್ತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ನೇರನೇಮಕಾತಿಯಡಿ 03 ಹುದ್ದೆಗಳು ಹಾಗೂ ಮುಂಬಡ್ತಿಯಡಿ 01 ಹುದ್ದೆಯನ್ನು ಸ್ಥಳೀಯ ವೃಂದಕ್ಕೆ ನಿಗಧಿಪಡಿಸಲಾಗಿದೆ.

ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ–40**ರಲ್ಲಿ ನೀಡಲಾಗಿದೆ.

7) **ಹಿರಿಯ ವಾಹನ ಚಾಲಕರು** : ಈ ವೃಂದದಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬಳ್ಳಾರಿ ಮತ್ತು ಕಲಬುರಗಿ ಜಿಲ್ಲೆಗಳಿಗೆ ತಲಾ ಒಂದರಂತೆ 02 ಹುದ್ದೆಗಳು ಮಂಜೂರಾಗಿವೆ. ಶೇ.80ರ ಮೀಸಲಾತಿಯಂತೆ ಸ್ಥಳೀಯರಿಗೆ 01 ಹುದ್ದೆ ಮತ್ತು ಸ್ಥಳೀಯೇತರರಿಗೆ 01 ಹುದ್ದೆಯನ್ನು ಮೀಸಲಿರಿಸಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ವೃಂದದಲ್ಲಿ ಶೇ.100ರಷ್ಟನ್ನು ಮುಂಬಡ್ತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ.

ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ–41**ರಲ್ಲಿ ನೀಡಲಾಗಿದೆ.

8) **ಕಾರ್ಯನಿರೀಕ್ಷಕರು:** ಈ ವೃಂದದಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಾದ (1) ಬಳ್ಳಾರಿ ಜಿಲ್ಲೆಗೆ 08, (2) ರಾಯಚೂರು ಜಿಲ್ಲೆಗೆ 05, (3) ಯಾದಗಿರಿ ಜಿಲ್ಲೆಗೆ 02, (4) ಕಲಬುರಗಿ ಜಿಲ್ಲೆಗೆ 05 (5) ಕೊಪ್ಪಳ ಜಿಲ್ಲೆಗೆ 03 ಮತ್ತು (6) ಬೀದರ್ ಜಿಲ್ಲೆಗೆ 02 ಹೀಗೆ ಒಟ್ಟು 25 ಹುದ್ದೆಗಳು ಮಂಜೂರಾಗಿರುತ್ತವೆ. ಈ ವೃಂದದಲ್ಲಿ ಶೇ.80ರ ಮೀಸಲಾತಿಯಂತೆ ಹೈದರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯರಿಗೆ 20 ಹುದ್ದೆಗಳನ್ನು ಮೀಸಲಿರಿಸಿದೆ ಮತ್ತು ಸ್ಥಳೀಯೇತರರಿಗೆ 05 ಹುದ್ದೆಗಳು ಲಭ್ಯವಾಗುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ಹುದ್ದೆಗಳನ್ನು ಶೇ.100ರಷ್ಟು ನೇರ ನೇಮಕಾತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ.

ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ–42**ರಲ್ಲಿ ನೀಡಲಾಗಿದೆ.

..5..

(ಸಿದ್ದೇಶ ಮೀನಕಲಹಟ್ಟಿ)
**ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು–ಎ)**

9) **ವಾಹನ ಚಾಲಕರು**: ಈ ವೃಂದದಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಾದ (1) ಬಳ್ಳಾರಿ ಜಿಲ್ಲೆಗೆ 03, (2) ರಾಯಚೂರು ಜಿಲ್ಲೆಗೆ 04, (3) ಯಾದಗಿರಿ ಜಿಲ್ಲೆಗೆ 02 (4) ಕಲಬುರಗಿ ಜಿಲ್ಲೆಗೆ 03 (5) ಕೊಪ್ಪಳ ಜಿಲ್ಲೆಗೆ 02 ಮತ್ತು (6) ಬೀದರ್ ಜಿಲ್ಲೆಗೆ 02 ಹೀಗೆ ಒಟ್ಟು 16 ಹುದ್ದೆಗಳು ಮಂಜೂರಾಗಿರುತ್ತವೆ. ಈ ವೃಂದದಲ್ಲಿ ಶೇ.80ರ ಮೀಸಲಾತಿಯಂತೆ ಹೈದರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯರಿಗೆ 13 ಹುದ್ದೆಗಳನ್ನು ಮೀಸಲಿರಿಸಿದೆ ಮತ್ತು ಸ್ಥಳಿಯೇತರರಿಗೆ 03 ಹುದ್ದೆಗಳು ಲಭ್ಯವಾಗುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ಹುದ್ದೆಗಳನ್ನು ಶೇ.100ರಷ್ಟು ನೇರ ನೇಮಕಾತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ.

ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ–43**ರಲ್ಲಿ ನೀಡಲಾಗಿದೆ.

**ಗ್ರೂಪ್–ಡಿ ವೃಂದ:**

1) **ಸಹಾಯಕ ಕಾರ್ಯನಿರೀಕ್ಷಕರು:** ಈ ವೃಂದದಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಾದ (1) ಬಳ್ಳಾರಿ ಜಿಲ್ಲೆಗೆ 07, (2) ರಾಯಚೂರು ಜಿಲ್ಲೆಗೆ 04 (3) ಯಾದಗಿರಿ ಜಿಲ್ಲೆಗೆ 03, (4) ಕಲಬುರಗಿ ಜಿಲ್ಲೆಗೆ 06 (5) ಕೊಪ್ಪಳ ಜಿಲ್ಲೆಗೆ 03 ಮತ್ತು (6) ಬೀದರ್ ಜಿಲ್ಲೆಗೆ 04 ಹೀಗೆ ಒಟ್ಟು 27 ಹುದ್ದೆಗಳು ಮಂಜೂರಾಗಿರುತ್ತವೆ. ಈ ವೃಂದದಲ್ಲಿ ಶೇ.80ರ ಮೀಸಲಾತಿಯಂತೆ ಹೈದರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯರಿಗೆ 23 ಹುದ್ದೆಗಳನ್ನು ಮೀಸಲಿರಿಸಿದೆ ಮತ್ತು ಸ್ಥಳಿಯೇತರರಿಗೆ 04 ಹುದ್ದೆಗಳು ಲಭ್ಯವಾಗುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ಹುದ್ದೆಗಳನ್ನು ಶೇ.100ರಷ್ಟು ನೇರ ನೇಮಕಾತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ.

ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ–44**ರಲ್ಲಿ ನೀಡಲಾಗಿದೆ.

2) **ಪರಿಚಾರಕರು (Attender)**: ಈ ವೃಂದದಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳಾದ (1) ಬಳ್ಳಾರಿ ಜಿಲ್ಲೆಗೆ 02, (2) ರಾಯಚೂರು ಜಿಲ್ಲೆಗೆ 01, (3) ಯಾದಗಿರಿ ಜಿಲ್ಲೆಗೆ 01, (4) ಕಲಬುರಗಿ ಜಿಲ್ಲೆಗೆ 02, (5) ಕೊಪ್ಪಳ ಜಿಲ್ಲೆಗೆ 01 ಮತ್ತು (6) ಬೀದರ್ ಜಿಲ್ಲೆಗೆ 01 ಹೀಗೆ ಒಟ್ಟು 08 ಹುದ್ದೆಗಳು ಮಂಜೂರಾಗಿರುತ್ತವೆ. ಈ ವೃಂದದಲ್ಲಿ ಶೇ.85ರ ಮೀಸಲಾತಿಯಂತೆ ಹೈದರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯರಿಗೆ 07 ಹುದ್ದೆಗಳು ಮತ್ತು ಸ್ಥಳೀಯೇತರರಿಗೆ 01 ಹುದ್ದೆಯನ್ನು ಮೀಸಲಿರಿಸಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ಹುದ್ದೆಗಳನ್ನು ಶೇ.100ರಷ್ಟು ನೇರ ನೇಮಕಾತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ.

ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ–45**ರಲ್ಲಿ ನೀಡಲಾಗಿದೆ.

3) **ಜವಾನ / ಕಾವಲುಗಾರ / ಸ್ವಚ್ಛಗಾರ:**

ಎ) **ಜವಾನ** ವೃಂದದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಾದ (1) ಬಳ್ಳಾರಿ ಜಿಲ್ಲೆಗೆ 02, (2) ರಾಯಚೂರು ಜಿಲ್ಲೆಗೆ 02, (3) ಯಾದಗಿರಿ ಜಿಲ್ಲೆಗೆ 01, (4) ಕಲಬುರಗಿ ಜಿಲ್ಲೆಗೆ 02, (5) ಕೊಪ್ಪಳ ಜಿಲ್ಲೆಗೆ 01 ಮತ್ತು (6) ಬೀದರ್ ಜಿಲ್ಲೆಗೆ 01 ಹುದ್ದೆಗಳು ಹೀಗೆ ಒಟ್ಟು 09 ಹುದ್ದೆಗಳು ಮಂಜೂರಾಗಿವೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ಹುದ್ದೆಗಳನ್ನು ಶೇ.100 ರಷ್ಟು ನೇರ ನೇಮಕಾತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ. ಶೇ.85ರ ಮೀಸಲಾತಿಯಂತೆ ಸ್ಥಳೀಯರಿಗೆ 08 ಹುದ್ದೆಗಳು ಹಾಗೂ ಸ್ಥಳೀಯೇತರರಿಗೆ 01 ಹುದ್ದೆಯನ್ನು ನೇರ ನೇಮಕಾತಿಯಡಿ ಭರ್ತಿ ಮಾಡಲು ಮೀಸಲಿರಿಸಿದೆ.

ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ–46**ರಲ್ಲಿ ನೀಡಲಾಗಿದೆ.

..6..

(ಸಿದ್ದೇಶ್ ಪೋತಲಕಟ್ಟೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು–ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

ಬಿ) **ಕಾವಲುಗಾರ** ವೃಂದದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಾದ (1) ಬಳ್ಳಾರಿ ಜಿಲ್ಲೆಗೆ 02, (2) ರಾಯಚೂರು ಜಿಲ್ಲೆಗೆ 01, (3) ಯಾದಗಿರಿ ಜಿಲ್ಲೆಗೆ 01, (4) ಕಲಬುರಗಿ ಜಿಲ್ಲೆಗೆ 01, (5) ಕೊಪ್ಪಳ ಜಿಲ್ಲೆಗೆ 00 ಮತ್ತು (6) ಬೀದರ್ ಜಿಲ್ಲೆಗೆ 01 ಹೀಗೆ ಒಟ್ಟು 06 ಹುದ್ದೆಗಳು ಮಂಜೂರಾಗಿವೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ಹುದ್ದೆಗಳನ್ನು ಶೇ.100 ರಷ್ಟು ನೇರ ನೇಮಕಾತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ. ಶೇ.85ರ ಮೀಸಲಾತಿಯಂತೆ ಸ್ಥಳೀಯರಿಗೆ 05 ಹುದ್ದೆಗಳು ಮತ್ತು ಸ್ಥಳೀಯೇತರರಿಗೆ 01 ಹುದ್ದೆಯನ್ನು ನೇರ ನೇಮಕಾತಿಯಡಿ ಭರ್ತಿ ಮಾಡಲು ಮೀಸಲಿರಿಸಿದೆ.

ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ-47**ರಲ್ಲಿ ನೀಡಲಾಗಿದೆ.

ಸಿ) **ಸ್ವಚ್ಛಗಾರ** ವೃಂದದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಾದ (1) ಬಳ್ಳಾರಿ ಜಿಲ್ಲೆಗೆ 01, (2) ರಾಯಚೂರು ಜಿಲ್ಲೆಗೆ 01, ಮತ್ತು (3) ಕಲಬುರಗಿ ಜಿಲ್ಲೆಗೆ 01 ಒಟ್ಟು 03 ಹುದ್ದೆಗಳು ಮಂಜೂರಾಗಿವೆ. ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಈ ಹುದ್ದೆಗಳನ್ನು ಶೇ.100 ರಷ್ಟು ನೇರ ನೇಮಕಾತಿಯಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ. ಶೇ.85ರ ಮೀಸಲಾತಿಯಂತೆ ಸ್ಥಳೀಯರಿಗೆ 02 ಹುದ್ದೆಗಳು ಮತ್ತು ಸ್ಥಳೀಯೇತರರಿಗೆ 01 ಹುದ್ದೆಯನ್ನು ನೇರ ನೇಮಕಾತಿಯಡಿ ಭರ್ತಿ ಮಾಡಲು ಮೀಸಲಿರಿಸಿದೆ.

ಈ ವಿವರಗಳನ್ನೊಳಗೊಂಡ ಸ್ಥಳೀಯ ವೃಂದದ ಘೋಷ್ವಾರೆಯನ್ನು **ಅನುಬಂಧ-48**ರಲ್ಲಿ ನೀಡಲಾಗಿದೆ.

**ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ರಾಜ್ಯ ಮಟ್ಟದ ಕೇಂದ್ರ ಕಛೇರಿಯ ಹುದ್ದೆಗಳು:**

ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ರಾಜ್ಯ ಮಟ್ಟದ ಕೇಂದ್ರ ಕಛೇರಿಯಲ್ಲಿ 35 ವಿವಿಧ ವೃಂದಗಳ ಒಟ್ಟು 129 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ಶೇ.8ರ ಮೀಸಲಾತಿಯಂತೆ ಸ್ಥಳೀಯರಿಗೆ ಒಟ್ಟು 24 ಹುದ್ದೆಗಳನ್ನು ಮೀಸಲಿರಿಸಿದೆ ಹಾಗೂ ಸ್ಥಳೀಯೇತರರಿಗೆ 106 ಹುದ್ದೆಗಳು ಲಭ್ಯವಾಗುತ್ತವೆ. ಈ ವಿವರಗಳನ್ನೊಳಗೊಂಡ ಘೋಷ್ವಾರೆಯನ್ನು **ಅನುಬಂಧ-49** ರಲ್ಲಿ ನೀಡಲಾಗಿದೆ.

**ಇತರೆ ಸೂಚನೆಗಳು:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಡಿ ಬರುವ ಇಲಾಖೆ / ಸ್ಥಳೀಯ ಸಂಸ್ಥೆ / ನಿಗಮಗಳಿಗೆ ಸಂಬಂಧಿಸಿದಂತೆ ಮೇಲೆ ವಿವರಿಸಿರುವ ಪ್ರಕಾರ, ಸ್ಥಳೀಯ ವೃಂದ / ರಾಜ್ಯ ಮಟ್ಟದ ಕಛೇರಿಗಳಲ್ಲಿ ಸ್ಥಳೀಯರಿಗೆ ಮೀಸಲಾತಿಗೆ ಲಭ್ಯವಾಗುವ ಹುದ್ದೆಗಳ ಕುರಿತಂತೆ ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧಗಳಲ್ಲಿ ಪ್ರಸ್ತುತ ಹೈದರಾಬಾದ್-ಕರ್ನಾಟಕ ಪ್ರದೇಶದ 06 ಜಿಲ್ಲೆಗಳಲ್ಲಿ ಹಾಗೂ ರಾಜ್ಯ ಮಟ್ಟದ ಹುದ್ದೆಗಳಿಗೆ ಸಂಬಂಧಿಸಿದಂತೆ ಆಯಾಯ ವೃಂದಗಳೆದುರು ಕಾರ್ಯನಿರ್ವಹಿಸುತ್ತಿರುವ "ಸ್ಥಳೀಯರು" ಸಂಖ್ಯೆಯನ್ನು ಇಲಾಖಾ ಮುಖ್ಯಸ್ಥರು ಒದಗಿಸಿರುವ ಮಾಹಿತಿಯ ಆಧಾರದ ಮೇಲೆ ತೋರಿಸಲಾಗಿದೆ. ಈ ರೀತಿ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯರ ಸಂಖ್ಯೆ ತಾತ್ಕಾಲಿಕವಾಗಿದ್ದು, ಸ್ಥಳೀಯ ವೃಂದಗಳಿಗೆ ಹಂಚಿಕೆ ಹೊಂದಲು ನಿಯಮಾನುಸಾರ ಅಭಿಮತವನ್ನು ವ್ಯಕ್ತಪಡಿಸಿ ಪರಿಶೀಲನೆಯ ನಂತರ ಅಂತಿಮಗೊಳಿಸಲಾಗುವುದು. ಈಗ ತೋರಿಸಿರುವ ಸದರಿ ಸ್ಥಳೀಯರ ಸಂಖ್ಯೆಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವವರು ಒಳಗೊಂಡಿರುವುದಿಲ್ಲವೆಂದು ಸ್ಪಷ್ಟಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ದೇಶ್ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಸದರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಒದಗಿಸುವಂತೆ ಕೋರಿದೆ.

**ಪ್ರತಿ ಇವರಿಗೆ:-**

1) ಸರ್ಕಾರದ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
2) ಆಯುಕ್ತರು, ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
3) ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
5) ಎಲ್ಲಾ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
6) ನಿರ್ದೇಶಕರು, ಕರ್ನಾಟಕ ರಾಜ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಬೆಂಗಳೂರು.
7) ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಂ., ಗ್ರಾ.ಅ.ಪಂ.ರಾಜ್ ಇಲಾಖೆ.
8) ನಿರ್ದೇಶಕರು, ಇ-ಆಡಳಿತ, ಎಸ್.ಇ.ಪಿ. ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ.
9) ಕಾರ್ಯಕಾರಿ ನಿರ್ದೇಶಕರು, ಮಹಾತ್ಮ ಗಾಂಧಿ ಪ್ರಾದೇಶಿಕ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
10) ಮುಖ್ಯ ಕಾರ್ಯಾಚರಣೆ ಅಧಿಕಾರಿ, ಎಂ.ಜಿ.ಎನ್.ಆರ್.ಇ.ಜಿ.ಎ., ಬೆಂಗಳೂರು
11) ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ರಾಜ್ಯ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
12) ನಿರ್ದೇಶಕರು,ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು.
13) ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾ.ಅ.ಪಂ.ರಾಜ್ ಇಲಾಖೆ.
14) ನಿರ್ದೇಶಕರು (ಪಂಚಾಯತ್ ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ.
15) ನಿರ್ದೇಶಕರು, (ಸು.ಗ್ರಾ.ಯೋ), ಗ್ರಾ.ಅ.ಪಂ.ರಾಜ್ ಇಲಾಖೆ.
16) ಉಪ ಕಾರ್ಯದರ್ಶಿ(ಗ್ರಾಮೀಣ ನೀರು ಸರಬರಾಜು), ಗ್ರಾ.ಅ.ಪಂ.ರಾಜ್ ಇಲಾಖೆ.
17) ನಿರ್ದೇಶಕರು (ಪಿ.ಎಂ.ಐ), ಗ್ರಾ.ಅ.ಪಂ.ರಾಜ್ ಇಲಾಖೆ.
18) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಉಪ ಕಾರ್ಯದರ್ಶಿ (ಆಡಳಿತ) / (ಅಭಿವೃದ್ಧಿ).
19) ಮೇಲ್ವಿಚಾರಕರು, ಗಣಕ ಕೋಶ, ಗ್ರಾ.ಅಪಂ.ರಾಜ್ ಇಲಾಖೆ - ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು ಕೋರಿದೆ.

**ಪ್ರತಿ ಮಾಹಿತಿಗಾಗಿ :-**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ.
2) ಸರ್ಕಾರದ ಅಪರ ಕಾರ್ಯದರ್ಶಿ(ಆಡಳಿತ)ರವರ ಆಪ್ತ ಸಹಾಯಕರು, ಗ್ರಾ.ಅ.ಪಂ.ರಾಜ್ ಇಲಾಖೆ.
3) ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಸಹಾಯಕರು, ಗ್ರಾ.ಅ.ಪಂ.ರಾಜ್ ಇಲಾಖೆ.
4) ಗ್ರಾ.ಅ.ಪಂ.ರಾಜ್ ಇಲಾಖೆಯ ಎಲ್ಲಾ ಅಧೀನ ಕಾರ್ಯದರ್ಶಿಗಳು
5) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಗಮ

## ಅನುಬಂಧ-31

| | | | |
|---|---|---|---|
| ವೃಂದ | : | ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್ -1 | ಗ್ರೂಪ್-'ಎ' |
| ವೇತನ ಶ್ರೇಣಿ | : | ರೂ.28100-50100 | (ಕಿರಿಯ ಶ್ರೇಣಿ) |
| ಮಂಜೂರಾದ ಒಟ್ಟು ಹುದ್ದೆಗಳು | : | 70 ಹುದ್ದೆಗಳು | |
| ವೃಂದ ಮತ್ತು ನೇರ ನೇಮಕಾತಿ ನಿಯಮ ಪ್ರಕಾರ | : | | |
| ನೇರ ನೇಮಕಾತಿ ಶೇ. | : | 10% | |
| ಮುಂಬಡ್ತಿ ಶೇ. | : | 90% | |

| ಕ್ರ. ಸಂ. | ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳು | ಮಂಜೂರಾತಿ | | | ಮೀಸಲಾತಿ ಶೇ.75% ರಂತೆ | | | ಕಾರ್ಯನಿರತ ಸಂಖ್ಯೆ | | | ಖಾಲಿ | ಕಲ್ಪಿಸಬೇಕಾದ ಮೀಸಲಾತಿ | | | | | | | ಕೊರತೆ/ ಹೆಚ್ಚುವರಿ | |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | | | | ಸ್ಥಳೀಯರು | | | ಸ್ಥಳೀಯೇತರರು | | | | | |
| | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಸ್ಥಳೀಯರು | ಸ್ಥಳೀಯೇತರರು | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಒಟ್ಟು | ಸ್ಥಳೀಯರು | ಸ್ಥಳೀಯೇತರರು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | |
| 1 | ಬಳ್ಳಾರಿ | 1 | 3 | 4 | 12 | 3 | 15 | - | 6 | 6 | 9 | 1 | 11 | 12 | - | 3 | 3 | 15 | -9 | 0 |
| 2 | ಕಲಬುರ್ಗಿ | 0 | 2 | 2 | | | | | | | | | | | | | | | | |
| 3 | ಬೀದರ್ | 0 | 2 | 2 | | | | | | | | | | | | | | | | |
| 4 | ರಾಯಚೂರು | 0 | 3 | 3 | | | | | | | | | | | | | | | | |
| 5 | ಕೊಪ್ಪಳ | 0 | 2 | 2 | | | | | | | | | | | | | | | | |
| 6 | ಯಾದಗಿರಿ | 0 | 2 | 2 | | | | | | | | | | | | | | | | |
| | | 1 | 14 | 15 | 12 | 3 | 15 | 0 | 6 | 6* | 9 | 1 | 11 | 12 | 0 | 3 | 3 | 15 | -9 | 0 |

ಸ್ಥಳೀಯರು-3

ಸ್ಥಳೀಯೇತರರು-3

*ಈ ವೃಂದದಲ್ಲಿ ನೇರ ನೇಮಕಾತಿಯಡಿ ಒಂದು ಹಾಗೂ ಮುಂಬಡ್ತಿಯಡಿ ಎಂಟು ಹುದ್ದೆಗಳು ಸ್ಥಳೀಯರಿಗೆ ಕೊರತೆ ಇದೆ.

(ಸಿದ್ದೇಶ್ ಮೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-1)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಗಮ

## ಅನುಬಂಧ-32

| | | | |
|---|---|---|---|
| ವೃಂದ | : | ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್ -2 | ಗ್ರೂಪ್-'ಎ' |
| ವೇತನ ಶ್ರೇಣಿ | : | ರೂ.28100-50100 | (ಕಿರಿಯ ಶ್ರೇಣಿ) |
| ಮಂಜೂರಾದ ಒಟ್ಟು ಹುದ್ದೆಗಳು | : | 15 ಹುದ್ದೆಗಳು | |
| ವೃಂದ ಮತ್ತು ನೇರ ನೇಮಕಾತಿ ನಿಯಮ ಪ್ರಕಾರ | : | | |
| ನೇರ ನೇಮಕಾತಿ ಶೇ. | : | | |
| ಮುಂಬಡ್ತಿ ಶೇ. | : | 100% | |

| ಕ್ರ. ಸಂ. | ಹೈದರಾಬಾದ್ -ಕರ್ನಾಟಕ ಪ್ರದೇಶದ ಜಿಲ್ಲೆಗಳು | ಮಂಜೂರಾತಿ | | | ಮೀಸಲಾತಿ ಶೇ.75% ರಂತೆ | | | ಕಾರ್ಯನಿರತ ಸಂಖ್ಯೆ | | | ಖಾಲಿ | ಕಲ್ಪಿಸಬೇಕಾದ ಮೀಸಲಾತಿ | | | | | | | ಕೊರತೆ/ ಹೆಚ್ಚುವರಿ | |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | | | | ಸ್ಥಳೀಯರು | | | ಸ್ಥಳೀಯೇತರರು | | | | | |
| | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಸ್ಥಳೀಯರು | ಸ್ಥಳೀಯೇತರರು | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಒಟ್ಟು | ಸ್ಥಳೀಯರು | ಸ್ಥಳೀಯೇತರರು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | |
| 1 | ಬಳ್ಳಾರಿ | 0 | 1 | 1 | | | | | | | | | | | | | | | | |
| 2 | ಕಲಬುರ್ಗಿ | 0 | 2 | 2 | | | | | | | | | | | | | | | | |
| 3 | ಬೀದರ್ | 0 | 0 | 0 | | | | | | | | | | | | | | | | |
| 4 | ರಾಯಚೂರು | 0 | 1 | 1 | 3 | 1 | 4 | - | 3 | 3 | 1 | 0 | 3 | 3 | - | 1 | 1 | 4 | -2 | 1 |
| 5 | ಕೊಪ್ಪಳ | 0 | 0 | 0 | | | | | | | | | | | | | | | | |
| 6 | ಯಾದಗಿರಿ | 0 | 0 | 0 | | | | | | | | | | | | | | | | |
| | | 0 | 4 | 4 | 3 | 1 | 4 | 0 | 3 | 3 | 1 | 0 | 3 | 3 | 0 | 1 | 1 | 4 | -2 | 1 |

ಸ್ಥಳೀಯರು-1

ಸ್ಥಳೀಯೇತರರು-2

ಈ ವೃಂದದಲ್ಲಿ ಸ್ಥಳೀಯರಿಗೆ ಎರಡು ಹುದ್ದೆಗಳು ಕೊರತೆ ಇದೆ ಹಾಗೂ ಒಬ್ಬರು ಸ್ಥಳೀಯೇತರರು ಹೆಚ್ಚುವರಿಯಾಗಿದ್ದಾರೆ.

(ಸಿದ್ದೇಶ್ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

(6)

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಗಮ

## ಅನುಬಂಧ-33

ವೃಂದ : ಸಹಾಯಕ ಅಭಿಯಂತರರು ಗ್ರೇಡ್-1 ಗ್ರೂಪ್-'ಬಿ'

ವೇತನ ಶ್ರೇಣಿ : ರೂ.22800-43200

ಮಂಜೂರಾದ ಒಟ್ಟು ಹುದ್ದೆಗಳು : 134 ಹುದ್ದೆಗಳು

ವೃಂದ ಮತ್ತು ನೇರ ನೇಮಕಾತಿ ನಿಯಮ ಪ್ರಕಾರ :

ನೇರ ನೇಮಕಾತಿ ಶೇ. : 90%

ಮುಂಬಡ್ತಿ ಶೇ. : 10%

| ಕ್ರ. ಸಂ. | ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳು | ಮಂಜೂರಾತಿ | | | ಮೀಸಲಾತಿ ಶೇ.75% ರಂತೆ | | | ಕಾರ್ಯನಿರತ ಸಂಖ್ಯೆ | | | ಖಾಲಿ | ಕಲ್ಪಿಸಬೇಕಾದ ಮೀಸಲಾತಿ: ಸ್ಥಳೀಯರು | | | ಕಲ್ಪಿಸಬೇಕಾದ ಮೀಸಲಾತಿ: ಸ್ಥಳೀಯೇತರರು | | | | ಕೊರತೆ/ ಹೆಚ್ಚುವರಿ | |
|---|---|---|---|---|---|---|---|---|---|---|---|---|---|---|---|---|---|---|---|---|
| | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಸ್ಥಳೀಯರು | ಸ್ಥಳೀಯೇತರರು | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಒಟ್ಟು | ಸ್ಥಳೀಯರು | ಸ್ಥಳೀಯೇತರರು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| 1 | ಬಳ್ಳಾರಿ | 9 | 1 | 10 | 26 | 8 | 34 | 17 | 2 | 19 | 15 | 23 | 3 | 26 | 7 | 1 | 8 | 34 | -15 | 0 |
| 2 | ಕಲಬುರ್ಗಿ | 7 | 1 | 8 | | | | | | | | | | | | | | | | |
| 3 | ಬೀದರ್ | 4 | 1 | 5 | | | | | | | | | | | | | | | | |
| 4 | ರಾಯಚೂರು | 4 | 1 | 5 | | | | | | | | | | | | | | | | |
| 5 | ಕೊಪ್ಪಳ | 1 | 1 | 2 | | | | | | | | | | | | | | | | |
| 6 | ಯಾದಗಿರಿ | 3 | 1 | 4 | | | | | | | | | | | | | | | | |
| | | 28 | 6 | 34 | 26 | 8 | 34 | 17 | 2 | 19 | 15 | 23 | 3 | 26 | 7 | 1 | 8 | 34 | -15 | 0 |

ಈ ವೃಂದದಲ್ಲಿ ಸ್ಥಳೀಯರಿಗೆ 26 ಹುದ್ದೆಗಳು ಮಂಜೂರಾಗಿದ್ದು, 11 ಸ್ಥಳೀಯರು ಹಾಗೂ 8 ಸ್ಥಳೀಯೇತರರು ಕಾರ್ಯನಿರ್ವಹಿಸುತ್ತಿದ್ದು, 15 ಸ್ಥಳೀಯ ಹುದೆಗಳು ಕೊರತೆ ಇರುತ್ತದೆ.

(ಸಿದ್ದೇಶ್ ಮೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಗಮ

## ಅನುಬಂಧ–34

ವೃಂದ : ಸಹಾಯಕ ಅಭಿಯಂತರರು ಗ್ರೇಡ್– 2 ಗ್ರೂಪ್–'ಬಿ'

ವೇತನ ಶ್ರೇಣಿ : ರೂ.22800–43200

ಮಂಜೂರಾದ ಒಟ್ಟು ಹುದ್ದೆಗಳು : 62 ಹುದ್ದೆಗಳು

ವೃಂದ ಮತ್ತು ನೇರ ನೇಮಕಾತಿ ನಿಯಮ :

ನೇರ ನೇಮಕಾತಿ ಶೇ. :

ಮುಂಬಡ್ತಿ ಶೇ. : 100%

| ಕ್ರ. ಸಂ. | ಹೈದರಾಬಾದ್–ಕರ್ನಾಟಕ ಪ್ರದೇಶದ ಜಿಲ್ಲೆಗಳು | ಮಂಜೂರಾತಿ | | | ಮೀಸಲಾತಿ ಶೇ.75% ರಂತೆ | | | ಕಾರ್ಯನಿರತ ಸಂಖ್ಯೆ | | | ಖಾಲಿ | ಕಲ್ಪಿಸಬೇಕಾದ ಮೀಸಲಾತಿ | | | | | | | ಕೊರತೆ/ ಹೆಚ್ಚುವರಿ | |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | | | | ಸ್ಥಳೀಯರು | | | ಸ್ಥಳೀಯೇತರರು | | | | | |
| | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಸ್ಥಳೀಯರು | ಸ್ಥಳೀಯೇತರರು | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಒಟ್ಟು | ಸ್ಥಳೀಯರು | ಸ್ಥಳೀಯೇ[illegible] |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | [illegible] |
| 1 | ಬಳ್ಳಾರಿ | – | 3 | 3 | | | | | | | | | | | | | | | | |
| 2 | ಕಲಬುರ್ಗಿ | – | 2 | 2 | | | | | | | | | | | | | | | | |
| 3 | ಬೀದರ್ | – | 2 | 2 | | | | | | | | | | | | | | | | |
| 4 | ರಾಯಚೂರು | – | 2 | 2 | 9 | 2 | 11 | 0 | 11 | 11 | – | – | 9 | 9 | – | 2 | 2 | 11 | –5 | 5 |
| 5 | ಕೊಪ್ಪಳ | – | 1 | 1 | | | | | | | | | | | | | | | | |
| 6 | ಯಾದಗಿರಿ | – | 1 | 1 | | | | | | | | | | | | | | | | |
| | | 0 | 11 | 11 | 9 | 2 | 11 | 0 | 11 | 11 | 0 | 0 | 9 | 9 | 0 | 2 | 2 | 11 | –5 | 5 |

ಸ್ಥಳೀಯರು–4

ಸ್ಥಳೀಯೇತರರು–7

ಈ ವೃಂದದಲ್ಲಿ ಒಟ್ಟು 11 ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಆ ಪೈಕಿ ನಾಲ್ವರು ಸ್ಥಳೀಯರು ಹಾಗೂ ಏಳು ಸ್ಥಳೀಯೇತರರು ಒಳಗೊಂಡಿದ್ದಾರೆ. ಆದುದರಿಂದ ಸ್ಥಳೀಯರಿಗೆ 5 ಹುದ್ದೆಗಳ ಕೊರತೆ ಇದೆ.

(ಸಿದ್ದೇಶ್ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು–ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

(8)

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಅನುಬಂಧ–35

ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಗಮ

ವೃಂದ : ಕಿರಿಯ ಅಭಿಯಂತರರು ಗ್ರೂಪ್–'ಸಿ'

ವೇತನ ಶ್ರೇಣಿ : ರೂ.17650–32000

ಮಂಜೂರಾದ ಒಟ್ಟು ಹುದ್ದೆಗಳು : 49 ಹುದ್ದೆಗಳು

ವೃಂದ ಮತ್ತು ನೇರ ನೇಮಕಾತಿ ನಿಯಮ :

ನೇರ ನೇಮಕಾತಿ ಶೇ. : 100%

ಮುಂಬಡ್ತಿ ಶೇ. :

| ಕ್ರ. ಸಂ. | ಹೈದರಾಬಾದ್ -ಕರ್ನಾಟಕ ಪ್ರದೇಶದ ಜಿಲ್ಲೆಗಳು | ಮಂಜೂರಾತಿ | | | ಮೀಸಲಾತಿ ಶೇ.80% ರಂತೆ | | | ಕಾರ್ಯನಿರತ ಸಂಖ್ಯೆ | | | ಖಾಲಿ | ಕಲ್ಪಿಸಬೇಕಾದ ಮೀಸಲಾತಿ | | | | | | | ಕೊರತೆ/ ಹೆಚ್ಚುವರಿ | |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | | | | ಸ್ಥಳೀಯರು | | | ಸ್ಥಳೀಯೇತರರು | | | | | |
| | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಸ್ಥಳೀಯರು | ಸ್ಥಳೀಯೇತರರು | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಒಟ್ಟು | ಸ್ಥಳೀಯರು | ಸ್ಥಳೀಯೇತರರು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| 1 | ಬಳ್ಳಾರಿ | 3 | 0 | 3 | 8 | 1 | 9 | 9 | 0 | 9 | 0 | 8 | 0 | 8 | 1 | 0 | 1 | 9 | 0 | 0 |
| 2 | ಕಲಬುರ್ಗಿ | 2 | 0 | 2 | | | | | | | | | | | | | | | | |
| 3 | ಬೀದರ್ | 1 | 0 | 1 | | | | | | | | | | | | | | | | |
| 4 | ರಾಯಚೂರು | 2 | 0 | 2 | | | | | | | | | | | | | | | | |
| 5 | ಕೊಪ್ಪಳ | 1 | 0 | 1 | | | | | | | | | | | | | | | | |
| 6 | ಯಾದಗಿರಿ | 0 | 0 | 0 | | | | | | | | | | | | | | | | |
| | ಒಟ್ಟು | 9 | 0 | 9 | 8 | 1 | 9 | 9 | 0 | 9 | 0 | 8 | 0 | 8 | 1 | 0 | 1 | 9 | 0 | 0 |

ಈ ವೃಂದದಲ್ಲಿ ಸ್ಥಳೀಯರು–8 ಹಾಗೂ ಸ್ಥಳೀಯೇತರರು ಒಬ್ಬರು ಕಾರ್ಯನಿರ್ವಹಿಸುತ್ತಿದ್ದು, ಯಾವುದೇ ಕೊರತೆ ಇರುವುದಿಲ್ಲ.

(ಸಿದ್ದೇಶ್ ಪೋತಲಕಟ್ಟೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು–ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಅನುಬಂಧ-36

ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಗಮ

ವೃಂದ : ಅಧೀಕ್ಷಕರು ಗ್ರೂಪ್-'ಸಿ'

ವೇತನ ಶ್ರೇಣಿ : ರೂ.20000-36300

ಮಂಜೂರಾದ ಒಟ್ಟು ಹುದ್ದೆಗಳು : 35 ಹುದ್ದೆಗಳು

ವೃಂದ ಮತ್ತು ನೇರ ನೇಮಕಾತಿ ನಿಯಮ ಪ್ರಕಾರ :

ನೇರ ನೇಮಕಾತಿ ಶೇ. :

ಮುಂಬಡ್ತಿ ಶೇ. : 100%

| ಕ್ರ. ಸಂ. | ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳು | ಮಂಜೂರಾತಿ | | | ಮೀಸಲಾತಿ ಶೇ.80% ರಂತೆ | | | ಕಾರ್ಯನಿರತ ಸಂಖ್ಯೆ | | | ಖಾಲಿ | ಕಲ್ಪಿಸಬೇಕಾದ ಮೀಸಲಾತಿ | | | | | | | ಕೊರತೆ/ ಹೆಚ್ಚುವರಿ | |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | | | | ಸ್ಥಳೀಯರು | | | ಸ್ಥಳೀಯೇತರರು | | | | | |
| | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಸ್ಥಳೀಯರು | ಸ್ಥಳೀಯೇತರರು | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ನೇರ ನೇಮಕಾತಿ | ಮುಂಬಡ್ತಿ | ಒಟ್ಟು | ಒಟ್ಟು | ಸ್ಥಳೀಯರು | ಸ್ಥಳೀಯೇತರರು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| 1 | ಬಳ್ಳಾರಿ | - | 2 | 2 | 6 | 1 | 7 | - | 3 | 3 | 4 | - | 6 | 6 | - | 1 | 1 | 7 | -3 | -1 |
| 2 | ಕಲಬುರ್ಗಿ | - | 1 | 1 | | | | | | | | | | | | | | | | |
| 3 | ಬೀದರ್ | - | 1 | 1 | | | | | | | | | | | | | | | | |
| 4 | ರಾಯಚೂರು | - | 1 | 1 | | | | | | | | | | | | | | | | |
| 5 | ಕೊಪ್ಪಳ | - | 1 | 1 | | | | | | | | | | | | | | | | |
| 6 | ಯಾದಗಿರಿ | - | 1 | 1 | | | | | | | | | | | | | | | | |
| | | 0 | 7 | 7 | 6 | 1 | 7 | 0 | 3 | 3 | 4 | 0 | 6 | 6 | 0 | 1 | 1 | 7 | -3 | -1 |

ಈ ವೃಂದದಲ್ಲಿ ಸ್ಥಳೀಯರಿಗೆ ಒಟ್ಟು 6 ಹುದ್ದೆಗಳು ಮಂಜೂರಾಗಿದ್ದು, 3 ಸ್ಥಳೀಯ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. 3 ಸ್ಥಳೀಯ ಹುದ್ದೆಗಳು ಕೊರತೆ ಇರುತ್ತವೆ.

(ಸಿದ್ದೇಶ್ ಪೋತಲಕಟ್ಟೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-2)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಅನುಬಂಧ-37

ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಗಮ

| | | |
|---|---|---|
| ವೃಂದ | : | ಪ್ರಥಮ ದರ್ಜೆ ಸಹಾಯಕರು ಗ್ರೂಪ್-'ಸಿ' |
| ವೇತನ ಶ್ರೇಣಿ | : | ರೂ.14550-26700 |
| ಮಂಜೂರಾದ ಒಟ್ಟು ಹುದ್ದೆಗಳು | : | 70 ಹುದ್ದೆಗಳು |
| ವೃಂದ ಮತ್ತು ನೇರ ನೇಮಕಾತಿ ನಿಯಮ | : | |
| ನೇರ ನೇಮಕಾತಿ ಶೇ. | : | 50% |
| ಮುಂಬಡ್ತಿ ಶೇ. | : | 50% |

| ಕ್ರ. ಸಂ. | ಹೈದರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳು | ಮಂಜೂರಾತಿ | | | ಮೀಸಲಾತಿ ಶೇ.80% ರಂತೆ | | | ಕಾರ್ಯನಿರತ ಸಂಖ್ಯೆ | | | ಖಾಲಿ | ಕಲ್ಪಿಸಬೇಕಾದ ಮೀಸಲಾತಿ | | | | | | | ಕೊರತೆ/ ಹೆಚ್ಚುವರಿ | |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | | | | ಸ್ಥಳೀಯರು | | | ಸ್ಥಳೀಯೇತರರು | | | | | |
